# ಆಧ್ಯಾತ್ಮಿಕ ಪಥದಲ್ಲಿ ವಿಜ್ಞಾನಿ

ಪ್ರವ್ರಾಜಿಕಾ ಪರಮಪ್ರಾಣಾ

(ಭಾಗ ಒಂದು)

ಸ್ವಾಮಿ ವಿವೇಕಾನಂದರ ಜೀವನ, ವಿಚಾರಧಾರೆಗಳಿಂದ ಪ್ರಭಾವಿತರಾದ ಹಾಗೂ ಅವರ ಶಿಷ್ಯರೊಂದಿಗೆ ಒಡನಾಡಿದ ಮಹಾನ್ ವ್ಯಕ್ತಿಗಳಲ್ಲಿ ಒಬ್ಬರು ಬಶೀಶ್ವರ ಸೇನ್ (ಅಥವಾ 'ಬೋಶಿ ಸೇನ್'). ವಿಜ್ಞಾನಿಯಾಗಿ ಅವರು ಎಷ್ಟೇ ಸಾಧನೆ ಮಾಡಿದ್ದರೂ, ಕೀರ್ತಿ ಗಳಿಸಿದ್ದರೂ ತಾವು ಕಂಡ ಆಧ್ಯಾತ್ಮಿಕ ಮಾರ್ಗವನ್ನು ತ್ಯಜಿಸಲಿಲ್ಲ. ಅವರ ಸ್ಫೂರ್ತಿದಾಯಕ ಜೀವನ ಚರಿತ್ರೆಯನ್ನು ಸಂಕ್ಷಿಪ್ತವಾಗಿ ಇಲ್ಲಿ ನಿರೂಪಿಸಿರುವ ಲೇಖಕಿ, ಶ್ರೀ ಶಾರದಾ ಮಠದ ಪ್ರಧಾನ ಶಾಖೆ ದಕ್ಷಿಣೇಶ್ವರದಲ್ಲಿ ಸೇವೆ ಸಲ್ಲಿಸುತ್ತಿದ್ದಾರೆ.



**ಬೋಶಿಯ ಮನೆ :** ಶ್ರೀಮಾತೆ ಶಾರದಾದೇವಿಯವರ ಜೀವನವನ್ನು ಓದಿದವರಿಗೆ ವಿಷ್ಣುಪುರದ ಹೆಸರು ಹೊಸದು ಎನ್ನಿಸುವುದಿಲ್ಲ. ಪಶ್ಚಿಮ ಬಂಗಾಳದ ಬಾಂಕುರ ಜಿಲ್ಲೆಯಲ್ಲಿರುವ ಸಣ್ಣ ಊರಿದು. ಇಲ್ಲಿಯ ಸುಂದರವಾದ ಟೆರಕೋಟಾ ಮಂದಿರಗಳು ಇಂದಿಗೂ ತಮ್ಮ ಪ್ರಸಿದ್ಧಿಯನ್ನು ಹಾಗೆ ಉಳಿಸಿಕೊಂಡಿವೆ. ಇಲ್ಲಿಯೇ ೧೮೮೭ ರಲ್ಲಿ ಬೋಶಿ ಸೇನ್ ಹುಟ್ಟಿದರು. ಕಲ್ಕತ್ತದಿಂದ ವಿಷ್ಣುಪುರದವರೆಗೆ ರೈಲಿನ ರಸ್ತೆಯಾದ ಮೇಲೆ, ಶ್ರೀಮಾತೆ ಜಯರಾಂಬಾಟಿಯಿಂದ ಕಲ್ಕತ್ತಕ್ಕೆ ಹೋಗಿ ಬರುವ ರಸ್ತೆಯಲ್ಲಿ ವಿಷ್ಣುಪುರದಲ್ಲಿ ವಿಶ್ರಾಮ ತೆಗೆದುಕೊಂಡು ಮುಂದುವರೆಯುತ್ತಿದ್ದರು. ೧೯೦೭ರಲ್ಲಿ ಶ್ರೀಮಾತೆ ಮೊದಲ ಬಾರಿಗೆ ವಿಷ್ಣುಪುರಕ್ಕೆ ಹೋದರು. ಆಗ ಅವರಿಗೆ ಅಲ್ಲಿ ಯಾರ ಪರಿಚಯವೂ ಇರಲಿಲ್ಲ. ಅವರು ಅಲ್ಲಿಯ ಲಾಲ್‌ಬಾಂದ್ ಎಂಬ ವಿಸ್ತಾರವಾದ ಕೊಳದ ತೀರದಲ್ಲಿದ್ದ ವಿಶ್ರಾಮಸ್ಥಾನದಲ್ಲಿ ಒಂದೆರಡು ಗಂಟೆ ಇದ್ದು, ಅಡುಗೆ ಮಾಡಿ ಊಟಮಾಡಿ ಮತ್ತೆ ಇತರ ಮಹಿಳೆಯರೊಂದಿಗೆ ಪ್ರಯಾಣ ಮುಂದುವರೆಸಿದ್ದರು. ೧೯೧೧ರಲ್ಲಿ ಶ್ರೀರಾಮಕೃಷ್ಣರ ಭಕ್ತರಾದ ಸುರೇಶ್ವರ ಸೇನರು ಶ್ರೀಮಾತೆಯನ್ನು ತಮ್ಮ ಮನೆಗೆ ಆಹ್ವಾನಿಸಿದರು. ಇವರು ವಿಜ್ಞಾನಿ ಬೋಶಿ ಸೇನರ ಹಿರಿಯ ಅಣ್ಣ. ಅಂದಿನಿಂದ ಆ ಮನೆಯೇ ಶ್ರೀಮಾತೆಯ ತಂಗುದಾಣವಾಯಿತು. ಈ ದೊಡ್ಡ ಮನೆಯನ್ನು ಬೋಶಿಯ ತಾಯಿ ಪ್ರಸನ್ನಮಯಿಗೆ ಆಕೆಯ ತಂದೆ ಬಳುವಳಿಯಾಗಿ ಕೊಟ್ಟಿದ್ದರು.

ಬೋಶಿಯ ತಂದೆ ರಾಮೇಶ್ವರ ಸೇನ್ ಆಗಿನ ಕಾಲದಲ್ಲಿ ಆಧುನಿಕ ಶಿಕ್ಷಣವನ್ನು ಪಡೆದ ಕೆಲವೇ ಕೆಲವರಲ್ಲಿ ಒಬ್ಬನು. ಈತ ಬಡ ವಿದ್ಯಾರ್ಥಿಗಳಿಗೆ ನಾನಾ ರೀತಿಯಲ್ಲಿ ಸಹಾಯ ಮಾಡುತ್ತಿದ್ದುದಲ್ಲದೆ, ಪ್ರೈಮರಿ ಸ್ಕೂಲುಗಳ ನಿರ್ಮಾಣಕ್ಕೂ ಶ್ರಮಿಸಿದನು. ಬೋಶಿಯ ತಾಯಿಯೂ ಈ ಎಲ್ಲಾ ಕೆಲಸಗಳಲ್ಲಿ ಸಮಭಾಗಿಯಾಗಿ ನಿಂತು ಸಹಾಯಮಾಡುತ್ತಿದ್ದಳು. ಇವರ ಐದುಜನ ಗಂಡುಮಕ್ಕಳಲ್ಲಿ ಬೋಶಿ ನಾಲ್ಕನೆಯವನಾಗಿದ್ದನು. ಆತನಿಗೆ ಇಬ್ಬರು ಅಕ್ಕಂದಿರೂ ಇದ್ದರು. ಬೋಶಿಯ ಸರಿಯಾದ ಹೆಸರು ವಶೀಶ್ವರ ಎಂದಿತ್ತು. ಎಲ್ಲರೂ ವಶೀ ಎಂದೇ ಕರೆಯುತ್ತಿದ್ದರು. ಈ ವಶಿ ಶಬ್ದವೇ ಬಂಗಾಳಿ ಉಚ್ಚಾರಣೆಯಲ್ಲಿ ಬೋಶಿ ಎಂದಾಗಿದೆ. ಸಂಸ್ಕೃತ ಮತ್ತು ಗಣಿತಗಳಲ್ಲಿ ಪಂಡಿತನಾದ ರಾಮೇಶ್ವರನು ಮಗನ ಜಾತಕವನ್ನು ಓದಿ ಚಕಿತನಾದನು. 'ಅತ್ಯಂತ ವಿದ್ಯಾವಂತನಾಗುವ ಈತ, ಆಧ್ಯಾತ್ಮಿಕ ಜಗತ್ತಿನಲ್ಲಿ ಹಿಂದಿನ ಕಾಲದ ಋಷಿಗಳಂತೆ ಸಾರ್ಥಕ ಜೀವನವನ್ನು ನಡೆಸುತ್ತಾನೆ. ಆದರೆ ಈತನ ಯಶಸ್ಸನ್ನು ಕಾಣಲು ತಂದೆ ತಾಯಿಯರಿಬ್ಬರೂ ಬದುಕಿರುವುದಿಲ್ಲ.' ಜಾತಕವನ್ನು ಓದಿದ ತಂದೆ ಆನಂದಿತನಾದರೂ ಅದನ್ನು ಕಾಣುವ ಭಾಗ್ಯ ತಮಗಿಲ್ಲವಲ್ಲಾ ಎಂದು ದುಃಖಿತನೂ ಆದನು.

ಬೋಶಿ ಎಂಟು ಒಂಬತ್ತು ವರ್ಷ ವಯಸ್ಸಿನಲ್ಲಿಯೇ ವೈಜ್ಞಾನಿಕ ಸಂಶೋಧನೆಗೆ ಕೈಹಾಕಿದನು. ಅವನ ಮೊದಲನೆಯ ಸಂಶೋಧನೆಗೆ ಬಲಿಯಾಯಿತು ತಂದೆ ರಾಮೇಶ್ವರನ ಹೆಮ್ಮೆಯ ಚಿನ್ನದ ಗಡಿಯಾರ. ಅದರಿಂದ ಹೊರಹೊಮ್ಮುತ್ತಿದ್ದ ಟಿಕ್ ಟಿಕ್ ಶಬ್ದ,

ನಿಧಾನವಾಗಿ ಸರಿಯುತ್ತಾ ಸುತ್ತುತ್ತಿರುವ ಮುಳ್ಳುಗಳು ಅವನ ಕುತೂಹಲವನ್ನು ದಿನದಿನಕ್ಕೂ ಹೆಚ್ಚಿಸುತ್ತಿದ್ದವು. ಅದರ ಹೊಳೆಯುವ ಬಣ್ಣವಾಗಲೀ, ಗೋಲಾಕಾರದ ಚಿನ್ನದ ಮೈಯಾಗಲಿ ಅವನಿಗೆ ಮುಖ್ಯವಾಗಿರಲಿಲ್ಲ. ಒಳಗಿನ ಯಾವ ಶಕ್ತಿಯಿಂದ ಅದು ನಡೆಯುತ್ತಿದೆ ಎಂದು ನೋಡಲು ಅವನ ಮನಸ್ಸು ತವಕಿಸುತ್ತಿತ್ತು. ಒಂದು ದಿನ ತಂದೆ ಮನೆಯಲ್ಲಿ ಇಲ್ಲದಾಗ, ಬೋಶಿ ತುಂಬ ಜೋಪಾನವಾಗಿ, ಗಡಿಯಾರವನ್ನು ತನ್ನ ಪುಟ್ಟ ಕೈಗಳಲ್ಲಿ ಎತ್ತಿಕೊಂಡು, ಚಿಕ್ಕ ಚಿಕ್ಕ ಸ್ಕ್ರೂಗಳನ್ನು ಬಿಚ್ಚಿ, ಅದರ ಪ್ರತಿಯೊಂದು ಭಾಗವನ್ನೂ ಬೇರೆಬೇರೆಯಾಗಿ ಮಾಡಿ ಕಾಗದದ ಮೇಲೆ ಜೋಡಿಸಿ ಇಟ್ಟನು. ತಂದೆ ಹಿಂತಿರುಗಿ ಬಂದವನು ಈ ದೃಶ್ಯವನ್ನು ಕಂಡು ಗಾಬರಿಯಿಂದ ಕೂಗಿಕೊಂಡಾಗ ಹಿಂದಿನಿಂದ ಕೇಳಿ ಬಂದಿತು ಪುಟ್ಟ ಹುಡುಗನ ಕೋಮಲ ಕಂಠಸ್ವರ. ಅತ್ಯಂತ ಗರ್ವದಿಂದ ಬೋಶಿ ಹೇಳಿದ್ದನು, ''ನಾನೇ ಅಪ್ಪಾ! ನಾನೇ ಯಾರ ಸಹಾಯವೂ ಇಲ್ಲದೆ ಅದನ್ನು ಬಿಚ್ಚಿ ಇಟ್ಟಿದ್ದೇನೆ!''

ರಾಮೇಶ್ವರನ ಇಬ್ಬರು ದೊಡ್ಡ ಮಕ್ಕಳಾದ ಸುರೇಶ್ವರ ಮತ್ತು ಗುಣೇಶ್ವರರು ವಿದ್ಯಾಭ್ಯಾಸದಲ್ಲಿ ತಂದೆ ಬಯಸಿದಂತೆ ಮುಂದೆ ಬರಲಿಲ್ಲ. ಸುರೇಶ್ವರನು ಆರಾಮವಾಗಿ ತಿರುಗಿಕೊಂಡಿರುವ ಲಘು ಪ್ರವೃತ್ತಿಯವನಾದರೂ ಮುಂದೆ ಶ್ರೀಮಾತೆ ಶಾರದಾದೇವಿಯವರ ಸೇವೆಯನ್ನು ಭಕ್ತಿಯಿಂದ ಮಾಡಿದ್ದರಿಂದ ರಾಮಕೃಷ್ಣರ ಭಕ್ತರ ನಡುವೆ ಭಕ್ತ ಸುರೇಶ್ವರ ಸೇನ್ ಎಂದು ಹೆಸರುವಾಸಿಯಾಗಿದ್ದನು. ಶ್ರೀಮಾತೆಯೂ ಪ್ರೀತಿಯಿಂದ ಈತನನ್ನು ಎರಡನೆಯ ಗಿರೀಶ್ ಘೋಷ್ ಎಂದು ಕರೆಯುತ್ತಿದ್ದರು.

**ವಿದ್ಯಾಕಾಂಕ್ಷೆ:** ಬೋಶಿಯ ಆನಂದದ ದಿನಗಳು ಅವನು ಹನ್ನೆರಡು ವರ್ಷದವನಿದ್ದಾಗ ತಂದೆಯ ಸಾವಿನೊಂದಿಗೆ ಕೊನೆಯಾದವು. ನ್ಯುಮೋನಿಯಾದಿಂದ ತನ್ನ ೫೨ನೇ ವಯಸ್ಸಿನಲ್ಲಿ ರಾಮೇಶ್ವರನು ತೀರಿಕೊಂಡನು. ದುಃಖ, ದುರ್ದಿನಗಳು ಆರಂಭವಾದವು. ಬೋಶಿಯ ವಿದ್ಯಾಭ್ಯಾಸ ಇಲ್ಲಿಗೆ ಕೊನೆಗೊಂಡಿತು. ಆರಂಭದಲ್ಲಿ ಬೋಶಿ ತಾಯಿಯ ಜೊತೆಜೊತೆಗೇ ಇದ್ದು ಅವಳ ದುಃಖ ನಿವಾರಣೆಗೆ ಪ್ರಯತ್ನಿಸುತ್ತಿದ್ದರೂ, ತನ್ನ ವಯಸ್ಸಿನ ಇತರ ಹುಡುಗರಂತೆ ಶಾಲೆಗೆ ಹೋಗಲು ಆಗುತ್ತಿಲ್ಲವಲ್ಲಾ ಎಂದು ಒಳಗೊಳಗೇ ಅವನ ಮನಸ್ಸು ಬೇಯುತ್ತಿತ್ತು. ಯಾವಾಗಲೂ ತನ್ನ ವಿದ್ಯಾಭ್ಯಾಸದತ್ತ ಗಮನವಿಟ್ಟಿರುತ್ತಿದ್ದ ತಂದೆಯನ್ನು ನೆನಪಿಸಿಕೊಂಡು ಸಂಕಟದಿಂದ ಹೃದಯ ಭಾರವಾಗುತ್ತಿತ್ತು. ಕೊನೆಯಲ್ಲಿ ನಾನಾ ರೀತಿ ಚಿಂತಿಸಿ, ವಿಷ್ಣುಪುರದಿಂದ ಇಪ್ಪತ್ತು ಮೈಲಿ ದೂರದಲ್ಲಿನ ಬಾದುಲ್ ಎಂಬ ಊರಿನಲ್ಲಿದ್ದ ತನ್ನ ಅಕ್ಕನ ಸಹಾಯದಿಂದ ಓದನ್ನು ಮುಂದುವರಿಸಲು ನಿರ್ಧರಿಸಿದನು. ತಾಯಿಗೆ ಹೇಳಿದರೆ ತನ್ನನ್ನು ದೂರ ಕಳಿಸಲು ಒಪ್ಪದಿರಬಹುದೆಂದು ಯೋಚಿಸಿ, ಬೋಶಿ ಒಂದು ಬೆಳಿಗ್ಗೆ ಅಡುಗೆ ಕೋಣೆಯಲ್ಲಿ ಕೆಲಸ ಮಾಡುತ್ತಿದ್ದ ತಾಯಿಯನ್ನು ಕೊನೆಯ ಬಾರಿಯಂತೆ ಒಮ್ಮೆ ನೋಡಿ, ಸದ್ದಿಲ್ಲದೆ ಮನೆಯಿಂದ ಹೊರಬಂದನು. ಮುಂದೆ ಬೋಶಿ ಮತ್ತೆ ವಿಷ್ಣುಪುರಕ್ಕೆ ಹಿಂದಿರುಗಿದಾಗ ಆನಂದದಿಂದ ಸ್ವಾಗತಿಸಲು ತಾಯಿ ಬದುಕಿರಲಿಲ್ಲ.

ರಸ್ತೆಯಲ್ಲಿ ನಡೆಯುವಾಗ ಅವನಿಗೆ ತನ್ನ ಕಾಲಿನ ಚಪ್ಪಲಿಯತ್ತ ದೃಷ್ಟಿ ಬಿದ್ದಿತು. ಚಪ್ಪಲಿ ಕಿತ್ತುಹೋದರೆ ಮತ್ತೆ ಕೊಂಡುಕೊಳ್ಳಲು ಅಕ್ಕನ ಮನೆಯವರ ಬಳಿ ಬೇಡಿಕೊಳ್ಳಬೇಕಾಗಬಹುದು ಎಂದು ಯೋಚಿಸಿ, ಅವನು ಚಪ್ಪಲಿಗಳನ್ನು ಕೈಯಲ್ಲಿ ಹಿಡಿದುಕೊಂಡು ನಡೆಯಲಾರಂಭಿಸಿದನು. ರಸ್ತೆಯಲ್ಲಿ ತಮ್ಮ ಮನೆಯಲ್ಲಿ ಈ ಹಿಂದೆ ಕೆಲಸ ಮಾಡುತ್ತಿದ್ದ ಒಬ್ಬಳು ಹೆಂಗಸನ್ನು ಕಂಡು, ತಾನು ಅಕ್ಕನ ಮನೆಗೆ ಹೋಗುತ್ತಿರುವುದಾಗಿ ತಾಯಿಗೆ ತಿಳಿಸುವಂತೆ ಹೇಳಿ ಬೋಶಿ ಮುಂದುವರಿದನು. ಈ ರಸ್ತೆಯಲ್ಲಿ ಅವನು ಬಹುಬಾರಿ ಪ್ರಯಾಣ ಮಾಡಿದ್ದನು. ಎತ್ತಿನ ಗಾಡಿಯಲ್ಲಿ ಮೆತ್ತನೆಯ ಆಸನದ ಮೇಲೆ ಕುಳಿತು, ತಿಂಡಿ ತಿನ್ನುತ್ತಾ ಹರಟುತ್ತಾ ಅಕ್ಕನ ಮನೆಗೆ ಹೋಗಿದ್ದನು. ಈಗ ಅದೇ ಹುಡುಗ ಬರಿಗಾಲಿನಲ್ಲಿ ಹಸಿದ ಹೊಟ್ಟೆ, ಭಯ ಆತಂಕಗಳಿಂದ ಧೂಳಿನ ರಸ್ತೆಯಲ್ಲಿ ಓಡುತ್ತಲೇ ನಡೆಯುತ್ತಿದ್ದನು. ಜೇಬಿನಲ್ಲಿ ಕೆಲವೇ ನಾಣ್ಯಗಳಿದ್ದವು. ರಸ್ತೆಯ ಪಕ್ಕದ ಅಂಗಡಿಯಿಂದ ಸ್ವಲ್ಪ ಬೆಲ್ಲ ಮತ್ತು ಮಂಡಕ್ಕಿಯನ್ನು ಕೊಂಡನು. ಹೀಗೆ ಎಷ್ಟುದೂರ ನಡೆದಿದ್ದನೋ ಗೊತ್ತಿಲ್ಲ. ಕತ್ತಲಾಗುತ್ತಿದ್ದಂತೆ ದಿಕ್ಕುಗೆಟ್ಟಂತಾದ ಬೋಶಿ ಭಯ, ಆಯಾಸಗಳಿಂದ ಸೋತು ನಿಸ್ತೇಜನಾಗಿ ರಸ್ತೆಯ ಪಕ್ಕದ ಮರವೊಂದಕ್ಕೆ ಒರಗಿ ಕುಳಿತುಕೊಂಡನು. ದಣಿವಿನಿಂದ ನಿದ್ದೆಗೆ ಜಾರಿದನು. ಬೆಳಿಗ್ಗೆ ಅವನಿಗೆ ತೀರ ಹತ್ತಿರದಲ್ಲಿ ಎತ್ತಿಗೆ ಕಟ್ಟಿದ ಗಂಟೆಯ ಶಬ್ದ ಕೇಳಿಬಂತು. ಕೂಡಲೇ ಬೋಶಿ ಆ ದಿಕ್ಕಿನಲ್ಲಿ ಓಡಿ, ಎದುರಿಗೆ ಬರುತ್ತಿದ್ದ ಎತ್ತಿನ ಗಾಡಿಯಲ್ಲಿ ತನ್ನ ತಂದೆಯ ಸ್ನೇಹಿತರೊಬ್ಬರು ಬರುತ್ತಿದ್ದುದನ್ನು ಕಂಡನು. ಹತ್ತಿರ ಕರೆದ ತಂದೆಯ ಆ ಸ್ನೇಹಿತರಿಗೆ ಮನಸ್ಸು ಬಿಚ್ಚಿ ಎಲ್ಲಾ ವಿಚಾರವನ್ನೂ ತಿಳಿಸಿ, ಅವರ ಸಹಾಯದಿಂದ ಬೇಗನೆ ಅಕ್ಕನ ಮನೆಯನ್ನು ತಲುಪಿದನು.

ಬಾದುಲ್ ಹಳ್ಳಿಯಲ್ಲಿ ಒಳ್ಳೆಯ ಶಾಲೆಗಳಿರಲಿಲ್ಲ. ಹೀಗಾಗಿ ಅವನ ಅಕ್ಕ ಬಿಹಾರದ ರಾಂಚಿಯಲ್ಲಿದ್ದ ತನ್ನ ಇನ್ನೊಬ್ಬಳು ಸಹೋದರಿಯ ಮನೆಗೆ ಬೋಶಿಯನ್ನು ಕಳಿಸಿದಳು. ಅಲ್ಲಿಯೇ ಅವನು ತನ್ನ ಶಾಲೆಯ ವಿದ್ಯಾಭ್ಯಾಸವನ್ನು ಮುಗಿಸಿದನು.

**ಗುರುವಿನೆದುರಿಗೆ:** ೧೯೦೭ರಲ್ಲಿ ಬೋಶಿ ಕಲ್ಕತ್ತದ ಸೇಂಟ್ ಕ್ಸೇವಿಯರ್ಸ್ ಕಾಲೇಜಿಗೆ ಸೇರಿಕೊಂಡನು. ೧೯೦೯ರಲ್ಲಿ ಅವನು ಎರಡನೆಯ ವರ್ಷದ ಡಿಗ್ರಿಯಲ್ಲಿ ಓದುತ್ತಿರುವಾಗ, ಅತನ ಗೆಳೆಯ ವಿಭೂತಿ ಘೋಷ್ ಬೇಲೂರು ಮಠಕ್ಕೆ ಹೊರಡುತ್ತಿದ್ದವನು ಬೋಶಿಯನ್ನು ಕರೆದನು. ಇಬ್ಬರೂ ದೋಣಿಯಲ್ಲಿ ಗಂಗೆಯನ್ನು ದಾಟಿ ಬೇಲೂರಿಗೆ ಬಂದರು. ಮಠವನ್ನು ಪ್ರವೇಶಿಸಿದ್ದೇ ವಿಭೂತಿ ನೇರವಾಗಿ, ಸ್ವಾಮಿ ವಿವೇಕಾನಂದರ ಕೊಠಡಿ ಇರುವ ಕಟ್ಟಡದ ಕೆಳಗಿನ ಅಂತಸ್ತಿನಲ್ಲಿರುವ ಒಂದು ಕೋಣೆಯನ್ನು ಪ್ರವೇಶಿಸಿದನು. ಒಳಗೆ ಹೋದಾಗ ಒಬ್ಬರು ಸಂನ್ಯಾಸಿ ಮಲಗಿರುವುದು ಕಂಡಿತು. ಡಯಾಬಿಟಿಸ್ ಮತ್ತು ಆಸ್ತಮಾಗಳಿಂದ ಅವರು ನರಳುತ್ತಿದ್ದರು. ವಿಭೂತಿ ಅವರಿಗೆ ಬೋಶಿಯ ಪರಿಚಯ ಮಾಡಿದನು. ಬೋಶಿಯ ತಲೆಯಿಂದ ಕಾಲಿನವರೆಗೂ ಅವರ ದೃಷ್ಟಿ ಹರಿಯಿತು. ನಂತರ ಸಂನ್ಯಾಸಿ ಅವರಿಗೆ ಹಾಕಿದ ಮೊದಲನೆಯ ಪ್ರಶ್ನೆ ''ತಲೆಗೇಕೆ ಅಷ್ಟೊಂದು ಎಣ್ಣೆ ಸುರಿದುಕೊಂಡಿದ್ದೀಯಾ?'' ಎರಡನೆಯ ಪ್ರಶ್ನೆ ''ಎಲೆ ಅಡಿಕೆ ಹಾಕುವ ಅಭ್ಯಾಸ ಇದೆ ಅಂತ ಕಾಣುತ್ತೆ...?'' ಈ

ತಿರಸ್ಕಾರ ಮತ್ತೂ ಮುಂದುವರೆಯಿತು, ''ಇಂಗ್ಲಿಷಿನವರಂತೆ ಕಾಲಿಗೆ ಬೂಟ್ಸನ್ನು ಹಾಕಿಕೊಂಡು ರಸ್ತೆಯ ಕೊಳಕನ್ನೆಲ್ಲಾ ಮೆಟ್ಟುತ್ತಾ ಇಲ್ಲಿಯವರೆಗೂ ಬಂದೆಯಾ? ಸ್ವಾಮಿ ವಿವೇಕಾನಂದರ ರಕ್ತದಿಂದ ಈ ಜಾಗ ತಯಾರಾಗಿದೆ...''. ಬೈಗುಳಗಳ ಮಳೆಯೇ ಸುರಿಯಿತು. ಬೋಶಿ ಮೌನವಾಗಿ ನಿಂತು ಕೇಳುತ್ತಿದ್ದನು. ಆದರೆ ಮನಸ್ಸಿನಲ್ಲಿಯೇ ಅಂದುಕೊಂಡನು. ''ನಾನು ಎಲ್ಲಾ ಬಲ್ಲವನಾಗಿದ್ದರೆ ನಿಮ್ಮ ಬಳಿ ಬರುವ ಅಗತ್ಯವೇನಿತ್ತು?''

ಈ ಸಂನ್ಯಾಸಿಯ ಹೆಸರು ಸ್ವಾಮಿ ಸದಾನಂದ. ಸ್ವಾಮಿ ವಿವೇಕಾನಂದರ ಮೊದಲನೆಯ ಸಂನ್ಯಾಸಿ ಶಿಷ್ಯರು. ೧೮೮೮ನೇ ಇಸವಿಯಲ್ಲಿ ಸದಾನಂದರು ಉತ್ತರಭಾರತದ ಹಾತ್‌ರಾಸ್ ಎಂಬ ಊರಿನಲ್ಲಿ ಸ್ಟೇಶನ್‌ಮಾಸ್ಟರ್ ಆಗಿದ್ದರು. ಆಗ ಅವರಿಗೆ ೨೩ ವರ್ಷ ವಯಸ್ಸು. ಹೆಸರು ಶರತ್‌ಚಂದ್ರ ಗುಪ್ತ ಎಂದಿತ್ತು. ಒಂದು ದಿನ ರೈಲ್ವೆಸ್ಟೇಶನ್ನಿನಲ್ಲಿ ಒಬ್ಬ ತರುಣ ಸಂನ್ಯಾಸಿ ಅವರ ಕಣ್ಣಿಗೆ ಬಿದ್ದನು. ಹಸಿವಿನಿಂದ ದಣಿದು ಮುಖ ಮ್ಲಾನವಾಗಿದ್ದರೂ ಆತನ ಕಣ್ಣುಗಳಿಂದ ಹೊರಹೊಮ್ಮುತ್ತಿದ್ದ ಅಲೌಕಿಕ ತೇಜಸ್ಸು ಶರತ್‌ಚಂದ್ರನನ್ನು ಆಕರ್ಷಿಸಿತು. ಅವರನ್ನು ಮನೆಗೆ ಕರೆದುಕೊಂಡು ಹೋದನು. ಕೆಲವೇ ಗಂಟೆಗಳಲ್ಲಿ ಅವನ ಜೀವನ ಹೊಸ ತಿರುವಿಗೆ ಬಂದು ನಿಂತಿತು. ಮನೆಯನ್ನೂ ಸರ್ಕಾರದ ಕೆಲಸವನ್ನೂ ತೊರೆದು ಸಂನ್ಯಾಸಿಯಾಗುವ ಇಚ್ಛೆಯನ್ನು ವ್ಯಕ್ತಪಡಿಸಿದನು. ಸಂನ್ಯಾಸದ ಜೀವನ ಕಠಿಣವಾದುದ್ದೆಂದು ಅರ್ಥಮಾಡಿಸಲು ಸ್ವಾಮೀಜಿ ಹೇಳಿದರು, ''ಮನೆಮನೆಗೆ ಹೋಗಿ ಭಿಕ್ಷೆ ಬೇಡಲು ನಿನಗೆ ಸಾಧ್ಯವೆ?'' ಕೂಡಲೇ ಸ್ಟೇಶನ್ ಮಾಸ್ಟರ್ ಒಂದು ಪಾತ್ರೆಯನ್ನು ಹಿಡಿದುಕೊಂಡು, ರೈಲಿನ ಕೂಲಿಗಳು ವಾಸಿಸುತ್ತಿದ್ದ ಗುಡಿಸಲುಗಳಿಗೆ ಹೋಗಿ, ಭಿಕ್ಷೆ ಬೇಡಿ ಆಹಾರವನ್ನು ಸಂಗ್ರಹಿಸಿ ಸ್ವಾಮೀಜಿಯ ಎದುರಿಗೆ ಬಂದು ನಿಂತನು. ಹೀಗೆ ನಾನಾ ರೀತಿಯಲ್ಲಿ ಪರೀಕ್ಷಿಸಿದ ನಂತರ ಈ ತರುಣನ ನಿರಹಂಕಾರ, ವೈರಾಗ್ಯಗಳನ್ನು ಕಂಡು ಮೆಚ್ಚಿದ ಸ್ವಾಮೀಜಿ ಆತನಿಗೆ ದೀಕ್ಷೆ ಕೊಡಲು ಒಪ್ಪಿದರು. ಶರತ್‌ಚಂದ್ರ 'ಸ್ವಾಮಿ ಸದಾನಂದ'ನಾದನು.

ಮತ್ತೊಂದು ದಿನ ಕಾಲೇಜಿಗೆ ರಜೆಯಿದ್ದಾಗ ವಿಭೂತಿ ಮತ್ತು ಬೋಶಿ ಬೇಲೂರು ಮಠಕ್ಕೆ ಹೋದರು. ಸದಾನಂದರ ಕೋಣೆಯ ಹೊರಗೆ ತನ್ನ ಬೂಟ್ಸ್‌ಗಳನ್ನು ತೆಗೆಯುತ್ತಿರುವಾಗ ಒಳಗೆ ಸದಾನಂದರು ವಿಭೂತಿಯೊಂದಿಗೆ ಮಾತನಾಡುತ್ತಿರುವುದು ಬೋಶಿಗೆ ಕೇಳಿಸಿತು. ''ಓ ವಿಭೂತಿ, ನಿನ್ನ ಗೆಳೆಯ ಹೇಗಿದ್ದಾನೆ? ಆ ದಿನ ನಾನು ಒರಟಾಗಿ ಮಾತನಾಡಿಬಿಟ್ಟೆ. ರಾತ್ರಿ ನನಗೆ ನಿದ್ದೆಯೇ ಬರಲಿಲ್ಲ ...'' ಈ ಬಾರಿ ಅವರು ಬೋಶಿಯೊಂದಿಗೆ ಅತ್ಯಂತ ಪ್ರೀತಿ ಕರುಣೆಗಳಿಂದ ವ್ಯವಹರಿಸಿದರು, ''ತಮ್ಮಾ ನೀನು ಹೊಗೆಸೊಪ್ಪು ಸೇವಿಸುವೆಯಾ?'' ಬೋಶಿ ಹೌದು ಎಂದನು. ಕೂಡಲೇ ಅವರು ತಮ್ಮ ಹುಕ್ಕವನ್ನು ಅವನಿಗೆ ಕೊಟ್ಟರು. ಹೊರಡುವ ಸಮಯ ಬಂದಾಗ ಸ್ವಾಮಿ ಸದಾನಂದರು ಒಂದೇ ದೃಷ್ಟಿಯಿಂದ ಬೋಶಿಯ ಕಣ್ಣುಗಳನ್ನೇ ನಿಟ್ಟಿಸಿ ನೋಡಿ ಹೇಳಿದರು, ''ನಾನು ಪಡೆದಿರುವುದೆಲ್ಲಾ ಇನ್ನು ನಿನ್ನದು'' ಬೋಶಿಯ ಶರೀರದಲ್ಲಿ ವಿದ್ಯುತ್ ಹರಿದಂತಾಯಿತು. ಆ ಕ್ಷಣದಲ್ಲಿಯೇ ಅವನು ಸದಾನಂದರನ್ನು ತನ್ನ ಗುರುವನ್ನಾಗಿ ಸ್ವೀಕರಿಸಿದನು.

**ಕ್ಷುರಸ್ಯ ಧಾರಾ:** ಬೇಸಿಗೆಯ ರಜೆಯಲ್ಲಿ ವಿಷ್ಣುಪುರದ ತಮ್ಮ ಮನೆಗೆ ಹಿಂತಿರುಗಿದನು. ಕೆಲವೇ ದಿನಗಳಲ್ಲಿ ಸಿಸ್ಟರ್ ನಿವೇದಿತಾರಿಂದ ಒಂದು ಟೆಲಿಗ್ರಾಂ ಬಂದಿತು. ''ಬೋಶಿ, ಸದಾನಂದರ ಆರೋಗ್ಯ ತೀರ ಹದಗೆಟ್ಟಿದೆ. ಅವರ ಸೇವೆ ಮಾಡಲು ಜನ ಸಿಗುತ್ತಿಲ್ಲ. ನೀನು ದಯವಿಟ್ಟು ಕಲ್ಕತ್ತೆಗೆ ಬಾ...'' ಬೋಶಿ ಚಿಂತಗೀಡಾದನು. ಅವನು ಇನ್ನೂ ವಿದ್ಯಾರ್ಥಿ. ಮನೆಯ ಹಣಕಾಸಿನ ಪರಿಸ್ಥಿತಿ ಸ್ವಲ್ಪವೂ ಚೆನ್ನಾಗಿಲ್ಲ. ಆದರೆ ತನ್ನ ಸ್ವಭಾವಕ್ಕೆ ಅನುಗುಣವಾಗಿ ಬೋಶಿ ಉತ್ತರಿಸಿದನು. ''ಆಗಲಿ ಬರುತ್ತೇನೆ.''

ಸೋದರಿ ನಿವೇದಿತಾ ಹಾಗೂ ಸದಾನಂದರಿಬ್ಬರೂ ಸ್ವಾಮಿ ವಿವೇಕಾನಂದರ ಶಿಷ್ಯರು. ಸದಾನಂದರು ಅವರಿಗೆ ಬಂಗಾಳಿ ಭಾಷೆ ಕಲಿಯಲು ಸಹಾಯ ಮಾಡಿದ್ದರು. ಕಲ್ಕತ್ತದಲ್ಲಿ ರೋಗ ಹಬ್ಬಿ ಲಕ್ಷಾಂತರ ಜನರು ಹುಳುಗಳಂತೆ ಸತ್ತು ಬೀಳುತ್ತಿದ್ದಾಗ, ಸ್ವಾಮೀಜಿಯವರ ಕರೆಗೆ ಓಗೊಟ್ಟು ನಿವೇದಿತಾ ಮತ್ತು ಸದಾನಂದರು ತಮ್ಮ ಜೀವನವನ್ನು ಲೆಕ್ಕಿಸದೆ ಜನರ ಸಹಾಯಕ್ಕೆ ಧಾವಿಸಿ ಹೋಗಿದ್ದರು. ನಿವೇದಿತಾ ಬಾಗ್‌ಬಜಾರಿನಲ್ಲಿ ತಮ್ಮ ಶಾಲೆಯ ಬಳಿಯೇ ಒಂದು ಸಣ್ಣ ಬಾಡಿಗೆ ಮನೆಯನ್ನು ತೆಗೆದುಕೊಂಡು ಸದಾನಂದರನ್ನು ಅಲ್ಲಿ ಇರಿಸಿ, ಸೇವೆ ಮಾಡುವ ವ್ಯವಸ್ಥೆ ಮಾಡಿದರು. ಈ ನಡುವೆ ಬೋಶಿಗೆ ಸದಾನಂದರಿಂದಲೂ ಒಂದು ಪತ್ರ ಬಂದಿತು. ೩.೧೧.೧೯೧೦ರಲ್ಲಿ ಅವರು ಬರೆಯುತ್ತಾರೆ :

''ಪ್ರಿಯ ಬೋಶಿ, ಸಿಸ್ಟರ್ ಒಂದು ಬಾಡಿಗೆ ಮನೆಯ ವ್ಯವಸ್ಥೆ ಮಾಡುತ್ತಿದ್ದಾರೆ. ನಾನು ಅತ್ಯಂತ ದುರ್ಬಲನಾಗಿಬಿಟ್ಟಿದ್ದೇನೆ. ನಾನಾಗಿಯೇ ಆ ಮನೆಗೆ ಹೋಗುವ ಶಕ್ತಿಯೂ ಇಲ್ಲ. ನೀನು ಯಾವಾಗ ಇಲ್ಲಿಗೆ ಬಂದು ನನ್ನನ್ನು ಕರೆದುಕೊಂಡು ಹೋಗುವೆ? — ಇತಿ ಸದಾನಂದ.''

ಬೋಶಿ ಮತ್ತು ಅವನ ತಮ್ಮ ಮತೀಶ್ವರ, ಇವನನ್ನು ಎಲ್ಲರೂ ತಾಬು ಎಂದು ಕರೆಯುತ್ತಿದ್ದರು, ಇಬ್ಬರೂ ಸದಾನಂದರನ್ನು ಕರೆದುಕೊಂಡು ಆ ಬಾಡಿಗೆಯ ಮನೆಗೆ ಹೋದರು. ಅಲ್ಲಿ ಅವರಿಬ್ಬರಿಗೂ ಜೀವನದಲ್ಲಿ ಮರೆಯಲಾಗದಂಥ ಅನುಭವಗಳಾದವು. ಸದಾನಂದರು ಈ ಹುಡುಗರಿಂದ ತಾವು ಪಡೆಯುವ ಸೇವೆಗೆ ಪ್ರತಿಫಲವಾಗಿ ಅವರಿಬ್ಬರಿಗೆ ಆಧ್ಯಾತ್ಮಿಕ ಜೀವನದಲ್ಲಿ ಮಾರ್ಗದರ್ಶನ ನೀಡಲು ಸಿದ್ಧರಾದರು. ಈ ಯಾವುದರ ಅರಿವಿಲ್ಲದ ಬೋಶಿ ಮತ್ತು ತಾಬು ದುರ್ಬಲವಾಗಿ ಹಾಸಿಗೆ ಹಿಡಿದಿರುವ ರೋಗಿಯೊಬ್ಬನ ಸೇವೆ ಮಾಡುವ ಒಂದೇ ಉದ್ದೇಶದಿಂದ ಆ ಮನೆಯನ್ನು ಪ್ರವೇಶಿಸಿದ್ದರು. ಆ ಮೊದಲನೆಯ ದಿನದಿಂದ ಮುಂದಿನ ಎರಡು ವರ್ಷಗಳವರೆಗೂ ಅವರಿಬ್ಬರಿಗೆ ಊಹಿಸಲೂ ಸಾಧ್ಯವಾಗದಂಥ ಅಸಾಧಾರಣವಾದ ತರಬೇತಿ ಆರಂಭವಾಯಿತು. ತಾವಿನ್ನು ಹೆಚ್ಚು ಕಾಲ ಬದುಕುವುದಿಲ್ಲ ಎಂದು ಸದಾನಂದರಿಗೆ ಅರಿವಾಗಿತ್ತು. ಪ್ರೀತಿಯ ಮಾತುಗಳನ್ನಾಡಿ ಹುಡುಗರನ್ನು ತಿದ್ದುವ ಸಮಯ ಅವರಿಗಿರಲಿಲ್ಲ. ತಮ್ಮ ಜೀವನದಲ್ಲಿ ಉಳಿದ ಆ ಅಲ್ಪ ಸಮಯದ ನಡುವೆಯೇ ಈ ತರುಣರ ಎಲ್ಲಾ ಹಳೆಯ ಸಂಸ್ಕಾರಗಳನ್ನು, ಅಪವಿತ್ರತೆಯನ್ನು ಸುಟ್ಟು ಭಸ್ಮ ಮಾಡುವ ಕೆಲಸಕ್ಕೆ ಅವರು ಕೈಹಾಕಿದರು. ಅವರಿದ್ದ ಮನೆ ಕಲ್ಕತ್ತದ ಬಾಗ್‌ಬಜಾರಿನ, ಬೋಸ್

ಪಾರಾ ಲೇನ್‌ನಲ್ಲಿತ್ತು. ಮನೆಯ ಮುಂದಿನ ಬಾಗಿಲಿನ ಹೊರಗೆ ಎರಡೂ ಪಕ್ಕದಲ್ಲಿ ಕಲ್ಲಿನ ಬೆಂಚುಗಳಿದ್ದವು. ಸಂಜೆಯಾದರೆ ಅಕ್ಕ ಪಕ್ಕದ ಜನ ಆ ಕಲ್ಲಿನ ಕಟ್ಟೆಗಳ ಮೇಲೆ ಕುಳಿತು ಹರಟೆ ಹೊಡೆಯುತ್ತಿದ್ದರು. ಅಲ್ಲಿ ಕುಳಿತವರಿಗೆ ಮಾತ್ರವಲ್ಲ, ಸುತ್ತಮುತ್ತಲಿನ ಮನೆಗಳಲ್ಲಿ ಇರುವವರಿಗೂ ಈ ಮನೆಯಲ್ಲಿ ಇದ್ದಕ್ಕಿದ್ದಂತೆ ಆರಂಭವಾಗುತ್ತಿದ್ದ ಕಿರುಚಾಟ ಬೈಗುಳಗಳು ಸ್ಪಷ್ಟವಾಗಿ ಕೇಳಿಸುತ್ತಿದ್ದವು. ತಾಬು ಮಾಡುತ್ತಿದ್ದ ಯಾವುದೇ ಕೆಲಸವೂ ಗುರುವಿಗೆ (ಸದಾನಂದರಿಗೆ) ಸರಿ ಬರುತ್ತಿರಲಿಲ್ಲ. ಏನಾದರೂ ತಪ್ಪನ್ನು ತೆಗೆದು ತೋರಿಸಿಯೇ ತೋರಿಸುತ್ತಿದ್ದರು. ಶುರುವಾಗುತ್ತಿತ್ತು ಬೈಗುಳಗಳ ಜಡಿಮಳೆ. ಬೋಶಿ ರಾತ್ರಿ ಅವರ ಸೇವೆ ಮಾಡಿ ಬೆಳಿಗ್ಗೆ ಕಾಲೇಜಿಗೆ ಹೋಗುತ್ತಿದ್ದ. ತಾಬು ಓದನ್ನು ಕೈಬಿಟ್ಟಿದ್ದರಿಂದ ದಿನವಿಡೀ ಮನೆಯಲ್ಲಿಯೇ ಇದ್ದು ಅವರನ್ನು ನೋಡಿಕೊಳ್ಳುತ್ತಿದ್ದನು.

ಸದಾನಂದರಿಗೆ ಹಾಸಿಗೆಯಿಂದ ತಾವಾಗಿಯೇ ಏಳುವ ಶಕ್ತಿ ಇರಲಿಲ್ಲ. ಇಡೀ ದಿನ ತಾಬು ಅವರಿಗೆ ಬೀಸಣಿಗೆಯಿಂದ ಗಾಳಿ ಹಾಕುತ್ತಿದ್ದನು. ಉರಿಸೆಕೆಯಲ್ಲಿ ಮಂಜುಗಡ್ಡೆಯನ್ನು ತಂದು ಅವರ ಶರೀರವನ್ನು ತಣ್ಣಗೆ ಇಡಲು ಶ್ರಮಿಸುತ್ತಿದ್ದನು. ಬೋಶಿಯಂತೆ ಅವನಿಗೆ ಚುರುಕು ಬುದ್ಧಿ ಇರಲಿಲ್ಲ. ಆಗಾಗ ಇಬ್ಬರಲ್ಲಿ ಭಿನ್ನಾಭಿಪ್ರಾಯ ಬಂದು ಜಗಳವಾಗುತ್ತಿತ್ತು. ಒಮ್ಮೆ ಹೀಗೆ ಜಗಳ ಮುಗಿಯದಂತಾದಾಗ ಬೋಶಿ ಕೋಪದಿಂದ ಸದಾನಂದರಿಗೆ ಹೇಳಿದನು. ''ತಾಬುವಿನ ಜೊತೆ ಕೆಲಸಮಾಡಲು ನನಗಿನ್ನು ಸಾಧ್ಯವೇ ಇಲ್ಲ...'' ಕೂಡಲೇ ಸದಾನಂದರಿಂದ ಉತ್ತರ ಬಂತು: ''...ನೀನೇ ಮೊದಲು ಇಲ್ಲಿಂದ ಹೊರಡು. ಅವನೊಬ್ಬ ಎತ್ತಿನಂಥ ಮನುಷ್ಯನಿರಬಹುದು. ನೀನು ಮಹಾ ಬುದ್ಧಿವಂತನೆಂದುಕೊಂಡು ಮಾಡುತ್ತಿರುವುದೇನು, ಯೋಚಿಸು..'' ಇಲ್ಲಿಗೆ ಜಗಳ ನಿಂತುಹೋಯಿತು.

ಅವರಲ್ಲಿ ಯಾರ ಬಳಿಯೂ ಹಣವಿರಲಿಲ್ಲ. ಶ್ರೀರಾಮಕೃಷ್ಣರ ಗೃಹಸ್ಥ ಶಿಷ್ಯರು ಆಗಾಗ ಹಣವನ್ನು ತಂದು ಕೊಡುತ್ತಿದ್ದರು. ಪೋಲೀಸ್‌ನಾಗಿದ್ದ ಬೋಶಿಯ ಚಿಕ್ಕ ಅಣ್ಣನೂ ಆಗಾಗ ಹಣವನ್ನು ಕಳಿಸುತ್ತಿದ್ದನು. ಬೋಶಿ ಹಾಗೂ ತಾಬು ತಮ್ಮ ಸುಖವನ್ನು ಮರೆತು ಸದಾನಂದರ ಸೇವೆಯನ್ನು ಅತ್ಯಂತ ನಿಷ್ಠೆಯಿಂದ ಮಾಡುತ್ತಿದ್ದರು. ಒಮ್ಮೆ ಕೆಲದಿನಗಳಿಂದ ಪರಿಚಿತರು ಯಾರೂ ಬರದ್ದರಿಂದ ಆಗಾಗ ಸಿಗುತ್ತಿದ್ದ ಅಲ್ಪಸ್ವಲ್ಪ ಕಾಣಿಕೆಯೂ ನಿಂತುಹೋಯಿತು. ಕೈಯಲ್ಲಿದ್ದ ಹಣ ಖಾಲಿಯಾಗುವ ಹಂತಕ್ಕೆ ಬಂದಿತ್ತು. ತಾಬುವಿಗೆ ಆ ಕಡೆ ಮನಸ್ಸಿರಲಿಲ್ಲ. ಬೋಶಿಯನ್ನು ಹಣಕಾಸಿನ ಚಿಂತೆ ಕಾಡಿಸುತ್ತಿತ್ತು. ನಾಳೆ ಏನು ಗತಿ ಎಂದು ಚಿಂತಿಸುತ್ತಾ ಒಂದು ರಾತ್ರಿ ಬೋಶಿ ಕಾಗದವನ್ನು ತೆಗೆದುಕೊಂಡು, ಬ್ಯಾಂಕಿನ ಚೆಕ್ಕನ್ನು ಬರೆಯುವಂತೆ ಅದರ ಮೇಲೆ ಬರೆದನು: ''ವಿವೇಕಾನಂದರ ಬ್ಯಾಂಕ್, ಇನ್ನೂರು ರೂಪಾಯಿಗಳು'' ಮರುದಿನ ಬೆಳಗಾಗುತ್ತಿದ್ದಂತೆ ಮನೆಯ ಬಾಗಿಲನ್ನು ಯಾರೋ ತಟ್ಟುತ್ತಿರುವುದು ಕೇಳಿಸಿತು. ಬೋಶಿ ಬಾಗಿಲು ತೆರೆದಾಗ ಪರಿಚಿತ ವ್ಯಕ್ತಿಯೊಬ್ಬರು ಒಳಗೆ ಬಂದು, ಇನ್ನೂರು ರೂಪಾಯಿ! ಸರಿಯಾಗಿ ಇನ್ನೂರು ರೂಪಾಯಿಯನ್ನು ಸದಾನಂದರ ಕಾಣಿಕೆಯಾಗಿ ಕೊಟ್ಟರು. ಬೋಶಿಯ ಕಣ್ಣುಗಳು ದೊಡ್ಡದಾಗಿ ತೆರೆದುಕೊಂಡವು. ಅವನ ಮುಖದ ಭಾವವನ್ನು ಗಮನಿಸಿದ ಸದಾನಂದರು ಕೇಳಿದರು, ''ಏನಾಯಿತು ಬೋಶಿ? ವಿಚಿತ್ರವಾಗಿ ಆಡುತ್ತಿದ್ದೀಯಲ್ಲಾ?'' ಬೋಶಿ ಎಲ್ಲಾ ವಿಚಾರವನ್ನು ತಿಳಿಸಿದಾಗ ಸದಾನಂದರು ತಿರಸ್ಕಾರದಿಂದ ಹೇಳಿದರು: ''ನಾಚಿಕೆಯಾಗುವುದಿಲ್ಲವೆ ನಿನಗೆ, ಎಂಥ ಹೀನ ಬುದ್ಧಿ! ಸ್ವಾಮೀಜಿಯ ಬಳಿ ತ್ಯಾಗ ವೈರಾಗ್ಯಗಳನ್ನು ಬಿಟ್ಟು ದುಡ್ಡನ್ನು ಕೇಳಿದೆಯಾ?'' ನಂತರ ಅವರು ಸ್ವಾಮಿ ವಿವೇಕಾನಂದರು ತರುಣರಾಗಿದ್ದಾಗ ತಂದೆ ತೀರಿಕೊಂಡ ಮೇಲೆ ಪಟ್ಟ ಕಷ್ಟ, ಹಣಕಾಸಿನ ಸಹಾಯ ಕೇಳಿ ಶ್ರೀರಾಮಕೃಷ್ಣರ ಬಳಿ ಹೋಗಿದ್ದು, ಶ್ರೀರಾಮಕೃಷ್ಣರು ಅವರನ್ನು ಕಾಳಿಯ ದೇವಸ್ಥಾನಕ್ಕೆ ಕಳುಹಿಸಿದಾಗ, ಜಗನ್ಮಾತೆಯ ಬಳಿ ಹಣವನ್ನು ಕೇಳಲು ಮರೆತು ತ್ಯಾಗ ವೈರಾಗ್ಯಗಳಿಗಾಗಿ ಪ್ರಾರ್ಥನೆ ಮಾಡಿದ ಬಗ್ಗೆ ಹೇಳಿದರು. ಆದರೆ ಗುರುವಿನ ಕೃಪೆಯಿಂದ ನರೇಂದ್ರನ ತಾಯಿ ರಸ್ತೆಗಿಳಿದು ಭಿಕ್ಷೆ ಬೇಡಬೇಕಾಗಿ ಬರಲಿಲ್ಲ ಎಂದೂ ಹೇಳಿದರು. ಬೋಶಿ ಮತ್ತೆಂದೂ ಹಣ, ಸಂಪತ್ತಿಗಾಗಿ ಪ್ರಾರ್ಥನೆ ಮಾಡಲಿಲ್ಲ. ಅವರಿಗೂ ಗುರುಕೃಪೆಯಿಂದ ಎಂದೂ ಯಾವ ತೊಂದರೆಯೂ ಬರಲಿಲ್ಲ.

ಬೋಶಿ ತನ್ನ ತಂದೆಯನ್ನು ಅತ್ಯಂತ ಗೌರವದಿಂದ ಕಾಣುತ್ತಿದ್ದನು. ಆದರೂ ಒಮ್ಮೆ ಸದಾನಂದರ ಎದುರಿಗೆ ಹೇಳಿದ, ''ನಮಗೋಸ್ಕರ ತಂದೆ ಏನನ್ನೂ ಉಳಿಸಿ ಹೋಗಲಿಲ್ಲ. ಅವರು ತೀರಿಕೊಂಡ ಮೇಲೆ ನಾವು ಅನಾಥರಾಗಿ ಹೋದೆವು.'' ''ಅಪ್ಪನ ವಿರುದ್ಧವಾಗಿ ಮಾತನಾಡುವೆಯಾ?'' ಸ್ವಾಮಿ ಸದಾನಂದರು ಗರ್ಜಿಸಿದರು. ''...ಅವರು ನಿನಗೆ ಈ ಆರೋಗ್ಯವಂತ ಶರೀರವನ್ನೂ, ವಿದ್ಯೆಬುದ್ಧಿಗಳನ್ನೂ ಕೊಟ್ಟು ಹೋಗಿದ್ದಾರೆ, ಇದಕ್ಕಿಂತ ಹೆಚ್ಚಾಗಿರುವುದು ಏನಿದೆ ಹೇಳು?'' ಆ ರಾತ್ರಿ ಸದಾನಂದರು ಬೋಶಿಯ ತಲೆಯನ್ನು ನೇವರಿಸಿ ರಾಗವಾಗಿ ಒಂದು ಸಂಸ್ಕೃತ ಶ್ಲೋಕವನ್ನು ಹೇಳಿದರು.

ಕಸ್ತ್ವಂ ಕೋಽಹಂ ಕುತ ಆಯಾತಃ ಕಾ ಮೇ ಜನನೀ ಕೋ ಮೇ ತಾತಃ ।
ಇತಿ ಪರಿಭಾವಯ ಸರ್ವಮಸಾರಂ ವಿಶ್ವಂ ತ್ಯಕ್ತ್ವಾ ಸ್ವಪ್ನವಿಚಾರಮ್ ॥

*(ನೀನು ಯಾರು? ಎಲ್ಲಿಂದ ಬಂದೆ? ನಿನ್ನ ತಾಯಿ, ತಂದೆ ಯಾರು? ವಿಚಾರ ಮಾಡು. ಈ ಜೀವನ ಅರ್ಥವಿಲ್ಲದ್ದು – ಕನಸಿನಂತೆ. ಇದನ್ನು ತ್ಯಾಗಮಾಡು.)*

ಶ್ರೀರಾಮಕೃಷ್ಣರು ಹೇಳುತ್ತಿದ್ದರು, ಒಳ್ಳೆಯ ಗುರು ಹೇಗಾದರೂ ಮಾಡಿ ಶಿಷ್ಯನು ಮುಕ್ತಿಯ ಪಥದಲ್ಲಿ ಮುಂದುವರಿಯುವಂತೆ ಮಾಡುತ್ತಾನೆ. ಅಂಥ ಗುರುವಿನ ಕೈಯಲ್ಲಿ ತರಬೇತಿ ಪಡೆಯಲು ಶಿಷ್ಯನಲ್ಲೂ ವೈರಾಗ್ಯ, ಭಕ್ತಿಗಳಿರಬೇಕು. ಬೋಶಿಯೂ ಸಂಪೂರ್ಣ ವಿಶ್ವಾಸ, ಶರಣಾಗತಿಗಳೊಂದಿಗೆ ಈ ಶಿಕ್ಷಣಕ್ಕೆ ತನ್ನನ್ನು ಒಪ್ಪಿಸಿಕೊಂಡ.

ಒಂದು ದಿನ ಬೆಳಗಿನ ಜಾವ ಮೂರು ಗಂಟೆಯಾಗಿತ್ತು. ಬೋಶಿ ಸದಾನಂದರ ಮಂಚದ ಪಕ್ಕದಲ್ಲಿಯೇ ನೆಲದ ಮೇಲೆ ಮಲಗಿದ್ದನು. ನಿದ್ದೆ ಬಂದರೂ ಅವನ ಒಳಮನಸ್ಸು ಜಾಗೃತವಾಗಿರುತ್ತಿತ್ತು. ಆದರೆ ಆ ದಿನ ಅವನಿಗೆ ಚೆನ್ನಾಗಿಯೇ ನಿದ್ದೆ ಬಂದಿತ್ತು. ಸದಾನಂದರು ನೀರನ್ನು ಕೇಳಿದರು. ಅಭ್ಯಾಸದ ಬಲದಿಂದ ಬೋಶಿ ಎದ್ದು ಕುಳಿತು ನೀರಿನ ಲೋಟವನ್ನು ಎತ್ತಿಹಿಡಿದನು. ಕಣ್ಣಿನ ಮಂಪರು ಇನ್ನೂ ಹೋಗಿರಲಿಲ್ಲ. ಸ್ವಲ್ಪ ನೀರು ಚೆಲ್ಲಿ ಹೋಯಿತು. ಸದಾನಂದರು ಲೋಟದಲ್ಲಿದ್ದ ನೀರನ್ನು ಅವನ ಮುಖದ ಮೇಲೆ ಎಸೆದರು. ''ಇನ್ನು ನಾನೇ ನಿನ್ನ ಸೇವೆ ಮಾಡಬೇಕೆಂದು ಕಾಣುತ್ತದೆ.... ಜೀವನವನ್ನು ನಿದ್ದೆಯಲ್ಲಿಯೇ ಮುಗಿಸಿಬಿಡುವೆಯಾ?''

ಶ್ರೀರಾಮಕೃಷ್ಣರು ಹೇಳುತ್ತಿದ್ದ ಕಥೆಗಳನ್ನು ಸದಾನಂದರು ತಮ್ಮ ಈ ತರುಣ ಸೇವಕರಿಗೆ ಆಗಾಗ ಹೇಳುತ್ತಿದ್ದರು. ನಿಷ್ಠೆಯಿಂದ ಸಂಸಾರದ ಕೆಲಸ ಮಾಡುತ್ತಾ ಭಗವಂತನ ಕೃಪೆಯನ್ನು ಪಡೆದ ರೈತನೊಬ್ಬನ ಕಥೆಯನ್ನು ಹೇಳಿದ್ದರು. ದೇವರ ಹೆಸರಿನಲ್ಲಿ ವಿಶ್ವಾಸ ವಿಟ್ಟು ನದಿಯನ್ನು ನಡೆದೇ ದಾಟಿದ ಹಾಲು ಮಾರುವವಳ ಕಥೆಯನ್ನು ಹೇಳಿದ್ದರು. ಪ್ರತಿಯೊಬ್ಬ ವ್ಯಕ್ತಿಯ ಕಷ್ಟಗಳ ಮೂಲವೇ ಅಹಂಕಾರ. ''ಪ್ರಭು ನಾನಲ್ಲ, ನಾನಲ್ಲ, ಕೇವಲ ನೀನು, ನೀನು'' ಎಂದು ಮನುಷ್ಯ ನಮ್ರನಾಗುವವವರೆಗೆ ಪಡಬೇಕಾದ ಕಷ್ಟಗಳನ್ನು ಮನದಟ್ಟು ಮಾಡಲು ರಾಮಕೃಷ್ಣರು ಕೊಡುತ್ತಿದ್ದ ಉಪಮೆಗಳನ್ನು ವಿವರಿಸಿ ಹೇಳುತ್ತಿದ್ದರು.

ಒಮ್ಮೆ ಗ್ರೇಟ್ ಈಸ್ಟರ್ನ್ ಹೋಟೆಲಿನಿಂದ ಬ್ರಿಟಿಷರ ಆಹಾರವನ್ನು ಕೊಂಡು ತರುವಂತೆ ಸದಾನಂದರು ಹೇಳಿದರು. ವಿವಿಧ ರೀತಿಯ ಆಹಾರ ಪದಾರ್ಥಗಳನ್ನು ತರಲಾಯಿತು. ಅವರು ತಟ್ಟೆಯನ್ನೊಮ್ಮೆ ವೀಕ್ಷಿಸಿ, ಬೋಶಿಗೆ ಹೇಳಿದರು. ''ಶುರುಮಾಡು ಬೋಶಿ'' ಬೋಶಿ ಗಾಬರಿಯಾದನು. ತಟ್ಟೆಯಲ್ಲಿದ್ದ ಮಾಂಸದ ಸಾರು ದನದ ಮಾಂಸವಿರಬಹುದೆಂದು ಹೆದರಿ ತಟ್ಟೆಗೆ ಕೈಹಾಕಲು ಹಿಂದೇಟು ಹಾಕಿದನು. ಮತ್ತೆ ಸದಾನಂದರು ಒತ್ತಾಯ ಮಾಡುತ್ತಾ ಅವನಿಗೆ ಹೇಳಿದರು, ''ಧರ್ಮ ಅಡುಗೆಯ ಪಾತ್ರೆಯಲ್ಲಿಲ್ಲ! ನಮ್ಮ ಹೃದಯದಲ್ಲಿದೆ. ಧರ್ಮ ಕೇವಲ ಆಚರಣೆಯಲ್ಲ , ಅದು ಮನುಷ್ಯನಲ್ಲಿಯ ಪೂರ್ಣತೆಯ ವಿಕಾಸ. ಶಾಸ್ತ್ರಗಳಲ್ಲಿ, ಪೂಜೆಯ ಪದ್ಧತಿಗಳಲ್ಲಿ ಧರ್ಮವಿಲ್ಲ, ಬೌದ್ಧಿಕ ತರ್ಕ-ಯುಕ್ತಿಗಳಲ್ಲಿಯೂ ಇಲ್ಲ'' ಹೀಗೆಂದು ಅವರು ಸ್ವಾಮಿ ವಿವೇಕಾನಂದರ ಜೀವನದ ಕೆಲವು ಘಟನೆಗಳನ್ನು ಉದಾಹರಣೆಯಾಗಿ ಹೇಳಿದರು.

ಆಗಲೇ ಬಂಗಾಳದ ಯುವಕರಲ್ಲಿ ಬ್ರಿಟಿಷರ ವಿರುದ್ಧ ಮನೋಭಾವ ತೀವ್ರವಾಗಿ ಜಾಗೃತವಾಗಿತ್ತು. ಅರವಿಂದರೇ ಮುಂತಾದ ಉಗ್ರಗಾಮಿಗಳು ಸೋದರಿ ನಿವೇದಿತಾ ಮನೆಗೆ ಬಂದು ವಿವಿಧ ರೀತಿಯ ಚರ್ಚೆಗಳಲ್ಲಿ ಭಾಗವಹಿಸುತ್ತಿದ್ದರು. ನಿವೇದಿತಾ ಭಾರತದ ಸ್ವಾತಂತ್ರ್ಯ ಚಳುವಳಿಗೆ ಬಂಬಲವಾಗಿ ನಿಂತಿದ್ದರು. ಯುವಕ ಬೋಶಿಗೂ ಇದರ ಬಿಸಿ ತಗುಲಿತು. ಅವಕಾಶ ಸಿಕ್ಕಾಗಲೆಲ್ಲಾ ಬ್ರಿಟಿಷರ ವಿರುದ್ಧವಾಗಿ ಅವನು ಧ್ವನಿ ಎತ್ತುತ್ತಿದ್ದನು. ಈ ಎಲ್ಲಾ ವಿಚಾರಗಳು ಸದಾನಂದರ ಗಮನಕ್ಕೆ ಬಾರದೆ ಇರಲಿಲ್ಲ. ಅವರೊಮ್ಮೆ ಬೋಶಿಯನ್ನು ಕೇಳಿದರು, ''ಭಾರತದಲ್ಲಿ ಬ್ರಿಟಿಷ್ ನಾಗರಿಕರ ಸಂಖ್ಯೆ ಎಷ್ಟಿರಬಹುದು?'' ''ಐವತ್ತು ಸಾವಿರವಿರ ಬೇಕು'' ಬೋಶಿ ಉತ್ತರಿಸಿದನು. ''ನಾವು ಎಷ್ಟು ಜನರಿದ್ದೀವಿ?'' ''೩೦ ಕೋಟಿ'', ಉತ್ತರ ಕೇಳಿ ಸದಾನಂದರು ಗಂಭೀರವಾಗಿ ಬೋಶಿಯನ್ನು ನಿಟ್ಟಿಸಿ ನೋಡಿ ಹೇಳಿದರು. ''ಈಗ ಹೇಳು ನಮ್ಮ ಗುಲಾಮತನಕ್ಕೆ ಕಾರಣವೇನು? ಬ್ರಿಟಿಷರಲ್ಲಿರುವ ಶಕ್ತಿಯೋ? ಅಥವಾ ನಮ್ಮ ದುರ್ಬಲತೆಯೊ?'' ಬೋಶಿ ನಿರುತ್ತರನಾದನು. ತುಂಬ ಕಳಕಳಿಯಿಂದ ಅವರು ಮುಂದುವರೆಸಿದರು. ''ನಿನ್ನ ಚಾರಿತ್ರ್ಯವನ್ನು ದೃಢಗೊಳಿಸಿಕೋ ಬೋಶಿ. ದೇಶಕ್ಕೆ ಶಾಶ್ವತವಾದದ್ದೇನಾದರೂ ಕೊಡು. ಅವರಿವರ ವಿರುದ್ಧವಾಗಿ ಕೂಗಾಡಿ ಯಾವುದೇ ಪ್ರಯೋಜನವಿಲ್ಲ.'' ಸ್ವಾಮಿ ವಿವೇಕಾನಂದರು ಯಾವುದೇ ರೀತಿಯ ರಾಜಕೀಯ ಚಟುವಟಿಕೆಗಳಲ್ಲಿ ಭಾಗವಹಿಸದಂತೆ ಮಠದ ಸಂನ್ಯಾಸಿಗಳಿಗೆ ಎಚ್ಚರಿಕೆ ನೀಡಿದ್ದರು. ಸ್ವಾಮೀಜಿ ದೇಶದ ತರುಣರಿಂದ ಬಯಸುತ್ತಿದ್ದುದ್ದು ಏನೆಂದು ಸದಾನಂದರು ಬೋಶಿಗೆ ಅರ್ಥ ಮಾಡಿಸಿದರು.

ಈ ಹಿಂದೆ ಬಾಗ್‌ಬಜಾರಿನಲ್ಲಿ ಶ್ರೀಮಾತೆ ಶಾರದಾದೇವಿಯವರು ಇದ್ದ ಮನೆಯಲ್ಲಿಯೇ ಸದಾನಂದರು ಕೆಲಕಾಲ ನೆಲೆಸಿದ್ದರು. ಅವರು ಒಂದೇ ಒಂದು ಸಲ ಶ್ರೀಮಾತೆಯ ದರ್ಶನ ಪಡೆದಿದ್ದರು. ಆ ದಿನ ಶ್ರೀಮಾತೆಯ ಶ್ರೀಚರಣಗಳಿಗೆ ವಂದಿಸಿ, ತಮ್ಮ ಶರೀರ ಮನಸ್ಸುಗಳು ಅಪೂರ್ವವಾದ ಪವಿತ್ರ ಭಾವದಲ್ಲಿ ತುಂಬಿ ಹೋಗಿರುವ ಅನುಭವವನ್ನು ಪಡೆದಿದ್ದರು. ತಮ್ಮ ಜೀವನದ ಈ ಅಂತಿಮ ಸಮಯದಲ್ಲಿ ಮತ್ತೊಮ್ಮೆ ಆ ಪವಿತ್ರತೆಯಲ್ಲಿ ಮೀಯಲು ಅವರ ಮನಸ್ಸು ಹಾತೊರೆಯಿತು. ತಮ್ಮ ಈ ಇಚ್ಛೆಯನ್ನು ಅವರು ಸ್ವಾಮಿ ಶಾರದಾನಂದರಿಗೆ ನಿವೇದಿಸಿದರು. ಇದನ್ನು ತಿಳಿದ ಕೂಡಲೇ ಶ್ರೀಮಾತೆ ಸದಾನಂದರನ್ನು ಕಾಣಲು ಅವರಿದ್ದ ಮನೆಗೆ ಬಂದರು. ಸದಾನಂದರು ಕೈಮುಗಿದುಕೊಂಡು ಕರುಣಾರ್ದ್ರ ಕಂಠದಲ್ಲಿ ಹೇಳಿದರು, ''ಅಮ್ಮಾ ಈ ಹಿಂದೆ ನನಗೆ ಕೃಪೆ ಮಾಡಿದ್ದೀರಿ. ಮತ್ತೊಮ್ಮೆ ನಿಮ್ಮ ಕೃಪೆಯನ್ನು ಯಾಚಿಸುತ್ತೇನೆ...'' ಶ್ರೀಮಾತೆ ಹೇಳಿದರು, ''ಮಗು, ಶ್ರೀರಾಮಕೃಷ್ಣರು ನಿನಗಾಗಿ ಕಾಯುತ್ತಿದ್ದಾರೆ.'' ಸದಾನಂದರು ಬಿಡಲಿಲ್ಲ, ಶ್ರೀಮಾತೆ ಪಾದದಿಂದ ತಮ್ಮ ತಲೆಯನ್ನು ಸ್ಪರ್ಶಿಸುವಂತೆ ಮತ್ತೆ ಮತ್ತೆ ಬೇಡಿಕೊಳ್ಳತೊಡಗಿದರು. ಶ್ರೀಮಾತೆ ಕೊನೆಗೂ ಒಪ್ಪಿಕೊಳ್ಳಲೇಬೇಕಾಯಿತು. ಸದಾನಂದರ ಮನಸ್ಸು ಶಾಂತಿಯಿಂದ ತುಂಬಿಹೋಯಿತು. ಅವರೆಂದರು, ''ಈಗ ನನಗೆ ಇಲ್ಲಿಂದ ಹೊರಡುವ ಟಿಕೆಟ್ ಸಿಕ್ಕಿತು.'' ಇದಾದ ಕೆಲವೇ ದಿನಗಳಲ್ಲಿ – ೧೮.೦೨.೧೯೧೧ರಂದು ಅವರು ದೇಹತ್ಯಾಗ ಮಾಡಿದರು. ಬೋಶಿ ಮತ್ತು ತಾಬು ಅನಾಥರಂತಾಗಿ ಬಿಡುತ್ತಾರೆಂದು ಎಲ್ಲರೂ ಅಂದುಕೊಂಡಿದ್ದರು. ಆದರೆ ಅವರಿಗೆ ಗುರು ಸದಾನಂದರಿಂದ ಸರಿಯಾದ ಶಿಕ್ಷಣ ಸಿಕ್ಕಿತ್ತು. ಜನ್ಮ ಹಾಗೂ ಸಾವಿನ ಆಚೆಗಿದೆ ಅಮರವಾದ ಆತ್ಮ. ಈ ಆತ್ಮವೇ ನಾನು, ಶರೀರವಲ್ಲ. ಶರೀರ ಎರಡು ದಿನದ್ದು ಮಾತ್ರ. ಗುರುವಿನ ಹೆಸರೇ 'ಸದಾನಂದ.' ಅವರು ತಮ್ಮ ಈ ಯುವ ಶಿಷ್ಯರಿಗೆ ಅದನ್ನೇ ಕೊಟ್ಟುಹೋದರು.

ಸ್ವಾಮಿ ವಿವೇಕಾನಂದರ ಅಮೆರಿಕನ್ ಶಿಷ್ಯೆಯಾದ ಸಿಸ್ಟರ್ ಕ್ರಿಸ್ಟೀನ್ ನಿವೇದಿತಾ ಸ್ಕೂಲಿನಿಂದ ಸದಾನಂದರನ್ನು ನೋಡಲು ಬರುತ್ತಿದ್ದರು. ಬೋಶಿ ಮತ್ತು ತಾಬು ಎಷ್ಟು ಪ್ರೀತಿಯಿಂದ ಸದಾನಂದರನ್ನು ನೋಡಿಕೊಳ್ಳುತ್ತಿದ್ದರೆಂದು ಕಣ್ಣಾರೆ ಕಂಡ ಕ್ರಿಸ್ಟೀನ್ ಬರೆಯುತ್ತಾರೆ: ''ಗುರು-ಶಿಷ್ಯರೆಂಬ ಭಾವವೇ ಅಲ್ಲಿರಲಿಲ್ಲ. ಆ ಎರಡು ವರ್ಷಗಳಲ್ಲಿ ಸದಾನಂದರು ತಾವು ವಿವೇಕಾನಂದರಿಂದ ಕಲಿತದ್ದನ್ನೆಲ್ಲಾ ತಮ್ಮ ಈ ಶಿಷ್ಯರಿಗೆ ಕೊಟ್ಟಿದ್ದರು. ಈಗಲೂ ನಾನು ಬೋಶಿಯಲ್ಲಿ ಆ ಭಾವ ತುಂಬಿರುವುದನ್ನು ಕಾಣುತ್ತೇನೆ. ಸದಾನಂದರು ಈ ಹುಡುಗರಿಗೆ ಹೇಳಿದ್ದರು, 'ನಾನು ಒಂದೇ ಒಂದು ಕೆಲಸವನ್ನು ನಿಮಗಾಗಿ ಮಾಡಬಲ್ಲೆ. ಸ್ವಾಮೀಜಿಯ ಬಳಿ ನಿಮ್ಮನ್ನು ಕರೆದೊಯ್ಯಬಲ್ಲೆ!' 'ಅಷ್ಟೇ ಸಾಕು' ಎಂದು ಅವರಿಬ್ಬರೂ ಕೂಗಿ ಹೇಳುತ್ತಿದ್ದರು. ಹುಡುಗರಿಬ್ಬರೂ ಆನಂದವಾಗಿದ್ದರು. ಆದರೆ

ಹೊರಗಿನ ಜನರ ದೃಷ್ಟಿಯೇ ಬೇರೆ. 'ಈ ಗುರುವಿನ ಬೈದಾಟ ಕಿರುಚಾಟಗಳ ನಡುವೆ ಈ ಬಡಪಾಯಿಗಳದ್ದು ಎಂಥ ಕಷ್ಟದ ಜೀವನವಪ್ಪಾ?' ಎಂದು ಅವರು ಮಾತನಾಡಿಕೊಳ್ಳುತ್ತಿದ್ದರು...''

ಸದಾನಂದರು ತೀರಿಹೋದ ಮೇಲೆ ಬೋಶಿ ಒಂದು ದಿನ 'ಉದ್ಬೋಧನ' ಮನೆಯಲ್ಲಿದ್ದ ಶ್ರೀಮಾತೆಯವರನ್ನು ಕಾಣಲು ಹೋದನು. ಶ್ರೀಮಾತೆಯ ಎದುರಿಗೇ ಸ್ವಾಮಿ ಶಾರದಾನಂದರು ಹೇಳಿದರು, ''ಬೋಶಿ, ಸದಾನಂದ ನಿನಗೆ ಮಂತ್ರದೀಕ್ಷೆ ಕೊಡಲಿಲ್ಲ. ನೀನು ದೀಕ್ಷೆ ಕೊಡುವಂತೆ ಶ್ರೀಮಾತೆಯವರನ್ನು ಕೇಳಿಕೋ.'' ಬೋಶಿ ಮೌನವಾಗಿ ನಿಂತಿದ್ದನು. ಶ್ರೀಮಾತೆ ಅಂತರ್ಯಾಮಿ. ಅವರೆಂದರು, ''ಇಲ್ಲ, ಬೋಶಿಗೆ ಮಂತ್ರದೀಕ್ಷೆ ಬೇಕಾಗಿಲ್ಲ.'' ಹೌದು, ಸದಾನಂದರು ಆಧ್ಯಾತ್ಮಿಕ ಜೀವನಕ್ಕೆ ಬೇಕಾದುದನ್ನೆಲ್ಲಾ ಅವನಿಗೆ ಕೊಟ್ಟು ಹೋಗಿದ್ದಾರೆ. ಬೋಶಿಗೆ ಈಗ ಬೇಕಾಗಿರುವುದು ಕೇವಲ ಶ್ರೀಮಾತೆಯ ಕೃಪೆ ಮಾತ್ರ. ಸದಾನಂದರೊಂದಿಗಿನ ಆ ಎರಡು ವರ್ಷಗಳ ಒಡನಾಟದಿಂದ ಬೋಶಿಗೆ ಈಗ ಚೆನ್ನಾಗಿ ಅರಿವಾಗಿತ್ತು – ಆಧ್ಯಾತ್ಮಿಕ ಜೀವನ ಅಂತರ್ಮುಖ ಜೀವನ. ಸಾಧಕನ ಹೋರಾಟ ತನ್ನಲ್ಲಿನ ಅಹಂಕಾರ, ಅಪವಿತ್ರತೆಗಳೊಂದಿಗೆ. ಮನುಷ್ಯನ ಮನಸ್ಸನ್ನು ಆತ್ಮಜಾಗೃತಿಯತ್ತ ಪ್ರೇರೇಪಿಸಲು ಜಗತ್ತಿನ ವಿವಿಧ ಭಾಗಗಳಿಗೆ ಬಿರುಗಾಳಿಯಂತೆ ಹೋದ ವಿವೇಕಾನಂದರೇ ನಿಜವಾದ ಕ್ರಾಂತಿಕಾರಿ.

**ವೈಜ್ಞಾನಿಕ ಅನ್ವೇಷಣೆ:** ಸ್ವಾಮಿ ಸದಾನಂದರು ತೀರಿಕೊಂಡ ಮೇಲೆ ಕೂಡ ಬೋಶಿ ಆ ಬಾಡಿಗೆ ಮನೆಯನ್ನು ಬಿಡಲಿಲ್ಲ. ಸಿಸ್ಟರ್ ನಿವೇದಿತಾ ಮೊದಲಿನಂತೆಯೇ ಅದರ ಬಾಡಿಗೆಯನ್ನು ಕಟ್ಟುತ್ತಿದ್ದರು. ಬೋಶಿ B.Sc. ಮುಗಿಸಿ M.Sc. ಸೇರಲು ಯೋಚಿಸುತ್ತಿದ್ದರು. ಹಣಕಾಸಿನ ಚಿಂತೆ ಮೊದಲಿನಂತೆಯೇ ಕಾಡುತ್ತಿತ್ತು. ಬೋಶಿಯ ಮನೆಗೆ ರಾಮಕೃಷ್ಣ ಮಠದ ಸಂನ್ಯಾಸಿ ಬ್ರಹ್ಮಚಾರಿಗಳು ಆಗಾಗ ಬರುತ್ತಿದ್ದರು. ಬ್ರಹ್ಮಚಾರಿಗಳಲ್ಲಿ ಕೆಲವರು ತಮ್ಮದೇ ವಯಸ್ಸಿನ ಬೋಶಿಗೆ ಹೇಳುತ್ತಿದ್ದರು, ''ಈ ಜೀವನದಲ್ಲಿಯೇ ಶಾಶ್ವತವಾದುದನ್ನು ಪಡೆಯಲು ಯತ್ನಿಸು.'' ಬೋಶಿ ಚಿಂತೆಗೀಡಾದರು. ರಾಮಕೃಷ್ಣ ಮಠಕ್ಕೆ ಸೇರಲು ನಿರ್ಧರಿಸಿ, ತಮ್ಮ ಮನೆಯ ಬಳಿಯಲ್ಲಿ ಇರುವ ಬಲರಾಮ ಬಸುವಿನ ಮನೆಯಲ್ಲಿದ್ದ ಸ್ವಾಮಿ ಬ್ರಹ್ಮಾನಂದರನ್ನು ಕಾಣಲು ಹೋದರು. ಬೋಶಿಯನ್ನು ಕಂಡೊಡನೆಯೇ ಬ್ರಹ್ಮಾನಂದರು ಕೇಳಿದರು. ''ವಿಜ್ಞಾನದಲ್ಲಿ ಇತ್ತೀಚೆಗೆ, ಆದ ಹೊಸ ಅನ್ವೇಷಣೆಯ ಬಗ್ಗೆ ಸ್ವಲ್ಪ ಹೇಳು.'' ಬೋಶಿ ಇಲೆಕ್ಟ್ರಾನ್‌ಗಳ ವಿಚಾರವಾಗಿ ಅವರಿಗೆ ವಿವರಿಸಿದನು. ವಿಜ್ಞಾನದ ವಿವಿಧ ಕೊಡುಗೆಗಳ ಬಗ್ಗೆ ಹೇಳಿದನು. ಅವನು ಮಾತನ್ನು ನಿಲ್ಲಿಸಿದ ಕೂಡಲೇ ಬ್ರಹ್ಮಾನಂದರು ಹೇಳಿದರು. ''ನೀನು ವಿಜ್ಞಾನದ ಅಧ್ಯಯನವನ್ನು ಮುಂದುವರೆಸು. ಬೋಶಿ, ಈ ವಿಜ್ಞಾನದ ಮೂಲಕವೇ ನಿನಗೆ ಎಲ್ಲವೂ ಸಿಗುತ್ತದೆ.'' ಬೋಶಿಯ ಮನಸ್ಸಿನ ದ್ವಂದ್ವ ದೂರವಾಯಿತು. ತನ್ನ ಮುಂದಿನ ಜೀವನ ಯಾವ ದಾರಿಯಲ್ಲಿ ಮುಂದುವರಿಯಲಿದೆ ಎಂದು ಸ್ಪಷ್ಟವಾಯಿತು.

ಸಿಸ್ಟರ್ ನಿವೇದಿತಾ ವಿಜ್ಞಾನಿ ಜಗದೀಶಚಂದ್ರ ಬೋಸ್‌ರಿಗೆ ಬೋಶಿಯ ಪರಿಚಯ ಮಾಡಿಕೊಟ್ಟರು. ಈಗಾಗಲೇ ಡಾ. ಜಗದೀಶ್ ಚಂದ್ರ ಬೋಸರು ವೈಜ್ಞಾನಿಕ ಕ್ಷೇತ್ರದಲ್ಲಿ ದೇಶ ವಿದೇಶಗಳಲ್ಲಿ ಪ್ರಖ್ಯಾತರಾಗಿದ್ದರು. ೨೧.೧೦.೧೮೯೦ರಲ್ಲಿ ಬ್ರಿಟಿಷ್ ಅಸೋಸಿಯೇಶನ್‌ನ್ನಲ್ಲಿ ತಮ್ಮ ಸಂಶೋಧನೆಗಳನ್ನು ಕುರಿತು ಅವರು ಭಾಷಣ ಮಾಡಿದ ನಂತರ ಹೊರದೇಶಗಳ ವಿವಿಧ ವೈಜ್ಞಾನಿಕ ಸಂಸ್ಥೆಗಳಿಂದ ಅವರಿಗೆ ಕರೆ ಬರಲಾರಂಬಿಸಿತು. ೧೮೯೬ರ ಅಕ್ಟೋಬರ್ ೨೫ರ ಲಂಡನ್ ಟೈಮ್ಸ್ ಪತ್ರಿಕೆ ಬರೆಯುತ್ತದೆ, ''Strikingly original Researches on the Polorization of the electric Ray ...'' ಡೈಲಿ ಕ್ರಾನಿಕಲ್ ಪತ್ರಿಕೆ ಬರೆಯುತ್ತದೆ, (೧೮.೧೧.೧೮೯೬) ''It is telegraphy without any kind of intervening conductor... this alone will be a priceless benifit to the human race''

''ಜಡವಸ್ತುವಿನಲ್ಲಿಯೂ ಪ್ರಾಣವಿದೆ. ಚೈತನ್ಯ ಎಲ್ಲೆಡೆಯೂ ಓತಪ್ರೋತವಾಗಿದೆ. ಮೊದಲು ಮರಗಿಡಗಳಲ್ಲಿ, ನಂತರ ಕಲ್ಲು ಲೋಹಗಳಲ್ಲಿ ಪ್ರಾಣವಿರುವುದನ್ನು ಪ್ರಮಾಣ ಮಾಡಿ ತೋರಿಸುತ್ತೇನೆ'' ಎಂದು ಸ್ವಾಮಿ ವಿವೇಕಾನಂದರ ಅನುಯಾಯಿಗಳಾದ ಸಾರಾಬುಲ್ ಮತ್ತು ಮಾರ್ಗರೆಟ್ ನೊಬೆಲ್ಲರ (ನಿವೇದಿತಾ) ಎದುರಿಗೆ ಘೋಷಣೆ ಮಾಡಿದ್ದರು ಡಾ. ಜಗದೀಶ್ ಚಂದ್ರ ಬೋಸ್.

೧೮೯೫ರಲ್ಲಿ ಅವರು ಕಲ್ಕತ್ತದ ಗವರ್ನರ್ ಎದುರಿಗೆ ಎಲೆಕ್ಟ್ರೋಮ್ಯಾಗ್ನೆಟಿಕ್ ತರಂಗಗಳ ಶಕ್ತಿಯ ಪ್ರದರ್ಶನ ಮಾಡಿ ತೋರಿಸಿದ್ದರು. ಈ ತರಂಗವನ್ನು ಒಂದು ದಪ್ಪವಾದ ಗೋಡೆಯ ಮೂಲಕ ಹಾಯಿಸಿ, ಭಾರವಾದ ವಸ್ತುವನ್ನು ಸರಿಸುವಂತೆ ಮಾಡಿದ್ದರು. ಈ ತರಂಗಗಳು ತಗುಲಿದಾಗ ಗಂಟೆ ತಾನಾಗಿಯೇ ಬಾರಿಸುವುದನ್ನು ತೋರಿಸಿದರು. ಮುಚ್ಚಿದ ಕೋಣೆಯೊಳಗೆ ನೆಲದೊಳಗೆ ಹೂತಿದ್ದ ಸಣ್ಣದೊಂದು ಬಾಂಬ್ ಸ್ಫೋಟಗೊಳ್ಳುವಂತೆ ಮಾಡಿದರು.

ಬೋಶಿ ಜಗದೀಶ್ ಚಂದ್ರರ ವಿದ್ಯಾರ್ಥಿಯಾಗಿ ಹೋದಾಗ ಬೋಸ್‌ರವರ ವೈಜ್ಞಾನಿಕ ಸಂಶೋಧನೆಯ ಸಂಸ್ಥೆ (Bose Institute) ಆರಂಭವಾಗಿಯೇ ಇರಲಿಲ್ಲ. ಪ್ರೆಸಿಡೆನ್ಸಿ ಕಾಲೇಜಿನ ಒಂದು ಸಣ್ಣ ಕೋಣೆಯಲ್ಲಿ ಕೇವಲ ಐದು ಜನ ಸಂಶೋಧನೆಯ ವಿದ್ಯಾರ್ಥಿಗಳೊಂದಿಗೆ ಜಗದೀಶ್‌ಚಂದ್ರರು ತಮ್ಮ ಲ್ಯಾಬೊರೇಟರಿಯನ್ನು ಆರಂಭಿಸಿದ್ದರು. ಬೋಶಿ ಅವರ ಬಳಿ ವಿದ್ಯಾರ್ಥಿಯಾಗಿ ಹೋದ ಸಮಯದಲ್ಲಿ ಜಗದೀಶ್‌ಚಂದ್ರರು ಭೌತವಿಜ್ಞಾನದಿಂದ ಸರಿದು ಸಸ್ಯಗಳಲ್ಲಿರುವ ಪ್ರಾಣದ ಶಕ್ತಿಯ ಅನ್ವೇಷಣೆಯತ್ತ ಮನಸ್ಸನ್ನು ಕೊಟ್ಟಿದ್ದರು. ಸಸ್ಯಗಳಲ್ಲಿ ಉಂಟಾಗುವ ಅತ್ಯಂತ ಸೂಕ್ಷ್ಮವಾದ ಪ್ರತಿಕ್ರಿಯೆಗಳನ್ನು ಅಧ್ಯಯನ ಮಾಡಲು ತಾವೇ ಯಂತ್ರವನ್ನು ತಯಾರಿಸಿದ್ದರು. ಸಸ್ಯಗಳಿಗೆ ಪ್ರಾಣಿಯಂತೆ ಬುದ್ಧಿ ಮನಸ್ಸುಗಳಿವೆ ಎಂದು ಪ್ರಮಾಣ ಮಾಡಲು ಅವರು ಹೋಗಲಿಲ್ಲ. ಹೊರಗಿನ ವಿದ್ಯುತ್ ತರಂಗಗಳು ಅಥವಾ ಬಿಸಿ ತಗುಲಿದಾಗ ಪ್ರಾಣಿಯ ಶರೀರದಲ್ಲಿ ಯಾವ ರೀತಿಯ ಪ್ರತಿಕ್ರಿಯೆ ಉಂಟಾಗುತ್ತದೆಯೋ, ಸಸ್ಯಗಳಲ್ಲಿಯೂ ಅದೇ ರೀತಿ ಉಂಟಾಗುತ್ತದೆ ಎನ್ನುವುದನ್ನು ಪ್ರಯೋಗಗಳ ಮೂಲಕ ವಿಸ್ಮಿತವಾದ ಜಗತ್ತಿನ ಎದುರು ಪ್ರದರ್ಶಿಸಿದರು.

*(ಮುಂದುವರಿಯುವುದು)*